ಫಾರಂ.

ಕೆಲಸದ ವಿವರ.	ಕ್ಕೆ.	ಮೊತ್ತ.	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ಒಪ್ಪುವ ದರ.
ಮಣ್ಣು ಕೆಲಸ	ಸಲೆ ಗಜ 1ಕ್ಕೆ	16,000	
ಕಲ್ಲು ಕೆಲಸ			

IV. ಪ್ರತಿ ಬಂದು ದರಖಾಸ್ತಿನ ಸಂಗಡಲೂ 1000 ರೂಪಾಯಿಗಳ ಕರ್ಣಾಟ ನೋಟುಗಳಾಗಲಿ, ಗವರ್ನ್‌ಮೆಂಟ್ ಪ್ರಾಂಸರೀ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ತೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಖ್ಖೋಟೇ ಮೇಲೆ "ಕಲ್ಲಹಳ್ಳಿ ಅಣೆ ಕಾಂಗಾರೀ ಬಗ್ಗೆ ದರಖಾಸ್ತಿಂಬದಾಗಿ" ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನು ತಿರಸ್ಕರಿಸಲಾಧೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ, ಚೀಫ್ ಇಂಜಿನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೇಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ಒಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ಯಂಟು ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕರ್ಣಾಟ್ಕ ಬ್ಯಾಂಕ್ ಎಂಬ ಕರಾರು ಪತ್ರವನ್ನು ಬರದು ಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದುಮಾಡಲ್ಪಟ್ಟು ತೇವಣಾತೀ ಹಣವನ್ನು ಸರಕಾರಕ್ಕೆ ಜೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತು ದೊರೆನ ಹೆಸರು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡ್ ಮೇಲೆ ಬರದು ಚಿಕ್ಕಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬೂ ದೊರಿಯಲಾರದು.

VIII. ಯಾವದಾಗಲೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವು ಅವರಿಗೆ ವಾಪಸ್ ಮಾಡಲ್ಪಡುತ್ತೆ.

IX. ಅನುಗುಣವಾದ ಕಲ್ಲುಗಳು ಕೆಲಸದ ಬಳಿಯಲ್ಲಿ ಕಟ್ಟಲು ಸುರ್ತಾರದಿಂದಲೇ ಕಂಟ್ರಾಕ್ಟದಾರರಿಗೆ ಸಪ್ಲೈಮಾಡಲ್ಪಡುತ್ತೆ. ಹಾಲಿ ಟೆಂಡರು, ಗಾರೆಯನ್ನು ಸಪ್ಲೈಮಾಡಿ ಸಂಕ್ಷಾಪ್ಷ ಕಲ್ಲಿನಿಂದ ಕಟ್ಟುವದಕ್ಕೆ ಮಾತ್ರವೇ ಆಗಿ ಯಿದೆ.

ಅಣೆಕಟ್ಟು 1000 ಅಡಿ ಲಾಂಬಿ 8 ಅಡಿ ಅಗಲ ಸ್ಲೋಪು 1:4

ಕೆಲಸದ ವಿವರ.	ಕ್ಕೆ.	ಮೊತ್ತ.
ಸುರಂಗ	ಸಲೆಗಜ	8
ಕಲ್ಲು ಮೆಟ್ಲು ವೆಟ್ಟಾಗಿ ಮಾಡುವಿಕೆ	ಚದರ ಅಡಿ	9891
ಸಾಧಾರಣವಾದ ಮಟ್ಟು ಕಾವುಗಾರಿ	ಸೆಲೆಗಜ	180
ಸೊರ್ತಿಗಾರೆ ಕಲ್ಲು	ಸಲೆಅಡಿ	71004
ಸಂಕ್ಷಾಸುಮಾಡಿದ ಕಲ್ಲು ಸೊರ್ತಿಯಿಂದ ಕಟ್ಟಲು	ಡಿಟೋ	12767
ಸಂಕ್ಷಾಸುಮಾಡಿದ ಕಲ್ಲನ ಮಂಡೇರಿ	ಚದರಅಡಿ	6774
ಪೊರ್ಟ್‌ಲೆಂಟು ಯಾ ಶೇಮೆಸುಂಣದ ಸಂದುಗಾರೆ	ಚದರ	266·79
ಪೇಲಿಂಗು	ಮೊತ್ತ ರೂ.	
ಇನ್‌ಸ್ಪೆಕ್ಷನ್ ಲಾಡ್ಜ್	ಡಿಟೋ	

ತಾಮಸ್. ಇರ್ವಾರ್,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಮೈಸೂರ ಡಿಸ್ಟ್ರಿಕ್ಟ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ನೋಟಿಫಿಕೇಷನ್.

ತಾರೀಖು 13–14ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹುಣಸೂರು ಸಂದಲ್ ಕೋಠಿಯಲ್ಲಿ ಇರತಕ್ಕ ಬಿಳಿ ಚಕ್ಕೆಯು 1896ನೇ ಇಸವಿ ಏಪ್ರೆಲ್ 20ನೇ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆಯಂತ ಮೈಸೂರ ಗೆಜೆಟಿನಲ್ಲಿ ಘಾಯಿಷ್ ಮಾಡಲ್ಪಟ್ಟಿರುವದು

390

ದು ಸರಿಯಷ್ಟ್ಯು ಸದರೀ ತಾರೀಖು ಪಬ್ಲಿಕ್ ರಜಾ ದಿವಸ ಆದ್ದರಿಂದ ಮೇಲೆ ನಮೂದಿಸಿರತಕ್ಕ ಸಂಬಲ್ ಬಿಳಿ ಚಕ್ಕೆಯು ಬರುವ ಮೇ ತಿಂಗಳ 11ನೇ ತಾರೀಖಿನ ದಿವಸ ಹರಾಜು ಮಾಡಿಸಲ್ಪಡುತ್ತೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 6ನೇ ಏಪ್ರೆಲ್ ಸ್ರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾರ್ನಹಳ್ಳಿ ಫಾಟಿಯಲ್ಲಿ ಟೋಲ್‌ಗೇಟೆಂಬ ಸುಂಕದ ಕಟ್ಟೆ ಒಳಗೆ ಸ್ರ್ 1896ನೇ ಇಸವಿ ಜುಲೈ ಮಾಹೆ 1ನೇ ಮಂಗಳವಾರ ಲಾಗಾಯತು ಸ್ರ್ 1897ನೇ ಜೂನ್ 30ರ ವರಿಗಿನ 12 ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು ಸ್ರ್ 1896ನೇ ಇಸವಿ ಮೇ ತಾರೀಖು 4ನೇ ಸೋಮವಾರ ಹಗಲು 11 ಘಂಟೆಗೆ ಸಕಲೇಶಪುರದ ವೊಕ್ಕಾಂನಲ್ಲಿ ತಾಲ್ಲೂಕು ಕಛೇರೀ ಬಳಿ ಅಮಲ್ದಾರ್‌ರಿಂದ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಛಡಸವಾಲನ್ನಾಗಲಿ ಅಥವಾ ಯಾವ ಸವಾಲನ್ನೇ ಆಗಲಿ ಕಾರಣವನ್ನು ಹೇಳದೇನೇ ಅಂಗೀಕರಿಸುವ ಯಾ ತಿರಸ್ಕರಿಸುವ ಅಧಿಕಾರವನ್ನು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು ಉಳಿಸಿಕೊಂಡಿರುತ್ತಾರೆ. ಮತ್ತು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರಾದ ಹೊರ್ತು ಹರಾಜು ಖಾಯಂ ಆದ ಹಾಗೆ ತಿಳಿಯಕೂಡದು.

3. ಛಡವರಖಾಸ್ತುದಾರನು ಹರಾಜು ಮೊಬಲಗಿನ ಪೈಕಿ ನಾಲ್ಕರಲ್ಲಿ ಬಂದು ಭಾಗವನ್ನು ಆ ಕೂಡಲೆ ಡಿವಾಜಿಟ್ ಇಡಬೇಕಲ್ಲದೆ ಬಾಕಿ ಉಳಿದ ಮೊಬಲಗನ್ನ ಸ್ರ್ 1896ನೇ ಇಸವಿ ಜುಲೈ 20ರ ಲಾಗಾಯತು ಸಮವಾದ 3 ಕಿಸ್ತುಗಳಾಗಿ ಪ್ರತಿ ಮಾಹೆ 20ನೇ ತಾರೀಖಿಗೆ ಪಾವತಿ ಮಾಡಲು ಬದ್ಧನಾಗಿ ಇರಬೇಕು. ಹರಾಜು ಮಂಜೂರಾತಿಯು ತನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 15 ದಿವಸಗಳ ಒಳಗೆ ಕ್ರಮವಾದ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಈ ಕಳಗೆ ನಮೂದಿಸುವ ಷರತ್ತಿಗೆ ಒಳಪಟ್ಟು ಕಂಟ್ರಾಕ್ಟಿನಂತೆ ತಾನು ಸರಿಯಾಗಿ ನಡದುಕೊಳ್ಳತಕ್ಕ ಬ್ಯೇ ಖಾತರಿ ಜಾಮೀರ್ ಕೊಡಬೇಕು. ಡಿವಾಜಿಟ್ ಮೊಬಲಗು ಹಾಜ್ಯಾಡದೇಯೂ ಮುಚ್ಚಳಿಕೆ ಬರದುಕೊಡದೇಯೂ ಜಾಮೀರ್ ಕೊಡದೇಯೂ ತಪ್ಪಿದರೆ ಬಾಬನ್ನು ದುಸರೆ ಹರಾಜ್ ಮೂಲಕ ವಿಕ್ರಯಿಸುವದಲ್ಲದೆ ನಷ್ಟಕ್ಕೆ ತಪ್ಪಿತಸ್ಥನಾದ ಇಜಾರದಾರನನ್ನು ಗುರಿಪಡಿಸುತ್ತೇವೀ ವಿಷಯಿ ಹಾಂಗೆ ಬಾಬನ್ನು ದುಸರೆ ಹರಾಜ್ ಮಾಡೋಣದರಲ್ಲಿ ಉಂಟಾಗುವ ಅಡಾಯಕ್ಕೆ ಅವನು ಭಾಗಿಯಾಗಲಾರನು.

4. ಕಿಸ್ತುಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಂಗೆ ಬಾಕಿ ಆದ ಮೊಬಲಗಿಗೆ ಪ್ರತಿವತಿ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿ 1ಕ್ಕೆ ಒಂದು ಪೈನಂತೆ ಬಡ್ಡಿ ಕೀರಸಿ ವಸೂಲ್ಮಾಡಲ್ಪಡುತ್ತೆ. ಮತ್ತು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಗೆ ಯುಕ್ತ ತೋರಿದರೆ ಅಥವಾ ಜಾಮೀರ್ದಾರನು ಅಪೇಕ್ಷಿಸಿದರೆ ಕಂಟ್ರಾಕ್ಟು ದುಸರೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗುವದು. ಅದರಿಂದ ಸರ್ಕಾರಕ್ಕೇನಾದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಕಂಟ್ರಾಕ್ಟುದಾರನಿಂದಲೇ ಆಗಲಿ ಅಥವಾ ಜಾಮೀರ್ದಾರನಿಂದಲೇ ಆಗಲಿ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತೆ.

5. ಹರಾಜ್ ಮೊಬಲಗು ರೂಪಾಯಿ 3—4ನೇ ಕಲಂಗೆಳಲ್ಲಿ ನಮೂದಾಗುವ ಷರತ್ತುಗಳಿಗೆ ಒಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಬಂದಾಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಇಜಾರದಾರನು ಬದ್ಧನಾಗಿರಬೇಕು.

6. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಿರುವ ಷೆಡ್ಯೂಲ್‌ನಲ್ಲಿ ನಮೂದಿರುವ ದರಗಳ ಮೇರೆಗೇನೇ ಟೋಲ್ ವಸೂಲ್ಮಾಡಬೇಕು ಮತ್ತು ಸ್ರ್ 1876ನೇ ಇಸವಿ ನವೆಂಬರ್ 4ನೇ ದಿವಸ 2'74ನೇ ನಂಬರ್ ಲೇಟ್ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಫಾಯಿಷಾಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

7. ಪ್ರತಿ ದಿನದ ಟೋಲ್‌ಯಾನೆ ಸುಂಕದ ವಸೂಲಿ ತೋರಿಸುವ ನಿಜವಾದ ಮತ್ತು ಕರಾರುವಾಕ್ಕಾದ ಲೆಖ್ಕವನ್ನು ಇಡಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಅಧಿಕಾರಿಗಳ ತನಿಖೆಗೆ ಸದರೀ ಲೆಖ್ಕವು ಒಳಪಟ್ಟು ಇರತಕ್ಕದ್ದು.

8. 7ನೇ ಷರತ್ತಿನಲ್ಲಿ ನಮೂದಿಸಿರುವ ಮೇರೆ ಕರಾರುವಾಕ್ಕಾ ಆಮದ್ ರಫ್ತ್ ಲೆಖ್ಕವನ್ನು ಇಡಲೋಸ್ಕರ ಶಿಬ್ಬಂದಿ ಅಂದರೆ ಬಬ್ಬ ಮುತ್ಸದ್ದಿಯ ಖರ್ಚನ್ನು ಕಂಟ್ರಾಕ್ಟುದಾರನೇ ವಹಿಸಬೇಕು.

9. ಗವರ್ನಮೆಂಟ್ ಟೋಲ್‌ಮನೆ ಮತ್ತು ಟೋಲ್‌ಗೇಟನ್ನು ಸಹ ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು. ಮತ್ತು ಅವುಗಳನ್ನು ಪೂರಾ ದುರಸ್ತಿನಲ್ಲಿ ಆತನು ಇಟ್ಟುಕೊಂಡಿರತಕ್ಕದ್ದು.

10. ಕಂಟ್ರಾಕ್ಟುದಾರನು ಪ್ರತಿ ಮಾಹೆ ಗುರ್ತೆ ತಾರೀಖಿನಲ್ಲಿ ಹಿಂದಲ ತಿಂಗಳ ಟೋಲ್ ವಸೂಲಿ ಲೆಖ್ಕವನ್ನು ಮಂಜರಾಬಾದ ತಾಲ್ಲೂಕು ಕಛೇರಿಗೆ ಕಳುಹಿಸತಕ್ಕದ್ದು.

11. ಕಂಟ್ರಾಕ್ಟುದಾರ ವಸೂಲ್ಮಾಡಬೇಕಾದ ದರಗಳ ತಪ್ಶೀಲು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದ್ಮಾಡಿ ಇದೆ.

1	ಪ್ರತಿ ನಾಲ್ಕು ಚಕ್ರದ ಭಂಡಿಗೆ	..	2	0 0
2	ಡಿಟೋ ಎತ್ತು ಡಿಟೋ	..	1	0 0
3	ಪ್ರತಿ ಯಕ್ಕ ಮೇಲೂ	..	0	4 0
4	ಸ್ಪ್ರಿಂಗ್‌ಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ ಬಂದಕ್ಕೆ	..	0	2 0
5	ಎಂಟು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರು ಕತ್ತೆಗಳಿಂದ ಯಳಿಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ ಬಂದಕ್ಕೆ	..	1	8 0
6	ಡಿಟೋ ಭರ್ತಿ ಇಲ್ಲದಿದ್ದರೆ	..	0	8 0
7	ಆರು ಎತ್ತುಗಳು ವಗೈರೆಗಳಿಂದ ಎಳಿಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	..	0	12 0
8	ಆರು ಎತ್ತುಗಳು ವಗೈರೆಗಳಿಂದ ಎಳಿಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಇಲ್ಲದಿದ್ದರೆ	..	0	6 0

20